ನಗರಸಭೆ ಮತ್ತು ಪುರಸಭೆಗಳಿಗೆ ನೀರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಖರ್ಚನ್ನು ಪೂರ್ತಿಯಾಗಿ ಭರಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಚೌಡರೆಡ್ಡಿ:– 1992ರಲ್ಲಿ ಮೊದಲು ಟಿ.ಎಂ.ಸಿ.ವಂತಿಕೆ ಏನಿತ್ತೋ, ಅದು ಲೋನ್ ಎಂದು ಟ್ರೀಟ್ ಮಾಡುತ್ತಿದ್ದೆವು. 1992ರಿಂದ ವಂತಿಕೆ ಕೊಡಬೇಕೆಂದು ಆಜ್ಞೆಯಾಗಿದೆ. ಇದರ ಬಗ್ಗೆ ಈಗಾಗಲೇ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತಿದ್ದೇನೆ. ನೀರು ಸರಬರಾಜು ಬಹಳ ಮುಖ್ಯವಾದುದು. ಯಾವ ಮುನಿಸಿಪಾಲಿಟಿಯವರು ವಂತಿಕೆ ಕೊಡುವುದಕ್ಕಾಗುವುದಿಲ್ಲ. ಅವರಿಗೆ ಇದನ್ನು ಲೋನ್ ಎಂದು ಪರಿಗಣಿಸಿ, ಆಮೇಲೆ ಆಕ್ಟ್ರಾಯ್ ಗ್ರಾಂಟ್‌ನಲ್ಲಿ ಇದನ್ನು ಮುರಿದುಕೊಳ್ಳಬೇಕೆಂದು ಹೇಳಿ ಮಾತನಾಡುತ್ತಿದ್ದೇನೆ. ಆದರೆ, ಅವರು ಲೋನ್‌ಗೆ ಒಂದು ನಿರ್ಣಯ ಮಾಡಿ ಕಳುಹಿಸಿಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ದಯಮಾಡಿ, ಈ ವರ್ಷವೇ ಕೆಲಸ ಪ್ರಾರಂಭವಾಗುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಚೌಡರೆಡ್ಡಿ:– ಮುಂದಿನ ವರ್ಷದಲ್ಲಿ ತೆಗೆದುಕೊಳ್ಳುತ್ತೇವೆ.

ಉಡುಪಿಯ ಶ್ರೀ ಲಕ್ಷ್ಮೀನಾರಾಯಣ ರಾವ್ ಸ್ಮಾರಕ ಭವನದ ನಿರ್ಮಾಣದಲ್ಲಿ ತಡೆ

358 (1732): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿಯ ಲಕ್ಷ್ಮೀನಾರಾಯಣರಾವ್ ಸ್ಮಾರಕ ಸ್ವರ್ಣ ಮಹೋತ್ಸವ ಪುರಭವನ ನಿರ್ಮಾಣದ ಕೆಲಸ ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆದರೆ ಕೆಲಸ ಪ್ರಾರಂಭಿಸುವಾಗ ಅಂದಾಜು ವೆಚ್ಚ ಎಷ್ಟು ಹಾಗೂ ಯಾವ ಮೂಲಗಳಿಂದ ಎಷ್ಟು ಖರ್ಚಾಗಿದೆ;

ಇ) ಇದನ್ನು ಪೂರ್ತಿ ಮಾಡಲು ಸರ್ಕಾರವು ತೆಗೆದುಕೊಂಡಿರುವ ಕ್ರಮ ಏನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಹೌದು.

ಆ) ಕೆಲಸ ಪ್ರಾರಂಭಿಸುವಾಗ ಅಂದಾಜು ವೆಚ್ಚ 30 ಲಕ್ಷ. (ಅಂದಾಜು ಮೂಲವು 10 ಲಕ್ಷ ಸಾರ್ವಜನಿಕರಿಂದ, 10 ಲಕ್ಷ ಪುರಸಭೆಯಿಂದ ಹಾಗೂ 10 ಲಕ್ಷ ಸರ್ಕಾರದಿಂದ) ಈವರೆಗೆ ಪುರಸಭೆಯು ಒಟ್ಟು 29 ಲಕ್ಷ ರೂ.ಗಳನ್ನು ಖರ್ಚು ಮಾಡಿದೆ.

ಇ) ಪುರಭವನವನ್ನು ಪುರಸಭೆಯು ಕಟ್ಟಿಸುತ್ತಿರುವುದರಿಂದ ಅದನ್ನು ಪೂರ್ತಿಗೊಳಿಸುವ ಬಗ್ಗೆ ಸರ್ಕಾರವು ತೆಗೆದುಕೊಳ್ಳುವ ಕ್ರಮ ಉದ್ಭವವಾಗುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸನ್ಮಾನ್ಯ ಅಧ್ಯಕ್ಷರೇ, ನನಗೆ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಉಡುಪಿಯ ಪ್ರಥಮ ನಗರಸಭಾಪತಿ ಹಾಗೂ ಉಡುಪಿಯ ನಿರ್ಮಾಪಕರು ಹಾಗೂ ಶ್ಲಾಘನೆಗೆ ಪಾತ್ರರಾದ ಅರೂರು ಲಕ್ಷ್ಮೀನಾರಾಯಣರಾವ್ ಸ್ಮಾರಕ ಸ್ವರ್ಣ ಮಹೋತ್ಸವದ ಪುರಭವನ, ಉಡುಪಿಯ ಅಜ್ಜರಕಾಡಿನಲ್ಲಿ, ನಿರ್ಮಾಣ ಪ್ರಾರಂಭವಾಗಿ, 2 ವರ್ಷದಿಂದ ಕೆಲಸ ನಿಂತಿದೆ. ಆರ್ಥಿಕ ತೊಂದರೆಯಿಂದ ಈ ಕೆಲಸ ನಿಂತಿದೆ. ಹಿಂದೆ, ಇದಕ್ಕೆ 600 ಕುಟುಂಬದಿಂದ 12 ಲಕ್ಷ ಕೊಟ್ಟಿದ್ದಾರೆ.

ಊರಿನವರಿಂದ 5 ಲಕ್ಷ ಹಾಕಿದ್ದಾರೆ, ನಗರಸಭೆಯು ಬಹುಮಾನದಿಂದ 8 ಲಕ್ಷ ಖರ್ಚು ಮಾಡಿದ್ದಾರೆ. ಹಿಂದೆ ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿದ್ದಾಗ 10 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದರು. ಆದರಲ್ಲಿ ಕೇವಲ 2 ಲಕ್ಷ ಮಾತ್ರ ಸಿಕ್ಕಿದೆ. ಈಗಾಗಲೇ ಅಲ್ಲಿ 27 ಲಕ್ಷ ರೂಪಾಯಿಗಳು ಖರ್ಚಾಗಿದೆ. ಆದರೆ, ಕೆಲಸ ಪೂರ್ತಿ ಆಗಿಲ್ಲ. ಕೆಲಸ ಪೂರ್ತಿಯಾಗಬೇಕೆಂದರೆ, ಇನ್ನೂ ಸುಮಾರು 10 ಲಕ್ಷ ಬೇಕಾಗುತ್ತದೆ. ಸರ್ಕಾರದಿಂದ 10 ಲಕ್ಷ ಬಿಡುಗಡೆಯಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾದ ಉತ್ತರ. ನನಗೆ ಸರಿಯಾದ ಮಾಹಿತಿ ಕೊಡಬೇಕೆಂದು ಕೇಳುತ್ತಿದ್ದೇನೆ. ಒಂದು ವೇಳೆ 10 ಲಕ್ಷ ಬಿಡುಗಡೆಯಾಗದಿದ್ದರೆ, 2 ಲಕ್ಷ ಬಿಟ್ಟು ಉಳಿದ 8 ಲಕ್ಷ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– ಸಭಾಧ್ಯಕ್ಷರೇ, 1985ರಲ್ಲಿ ಈ ಸ್ಮಾರಕ ಸ್ವರ್ಣಮಹೋತ್ಸವ ಪುರಭವನ, ಇದು 30 ಲಕ್ಷಕ್ಕೆ ಎಸ್ಟಿಮೇಟ್ ಆಗಿದೆ. ಇದರಲ್ಲಿ ಸಾರ್ವಜನಿಕ ವಂತಿಕೆ 10 ಲಕ್ಷ, ಟಿ.ಎಂ.ಸಿ. 10 ಲಕ್ಷ, ಸರ್ಕಾರ 10 ಲಕ್ಷ. ಇದರಲ್ಲಿ ನಾವು ಈಗಾಗಲೇ 10 ಲಕ್ಷ ಬಿಡುಗಡೆ ಮಾಡಿದ್ದೇವೆಂದು ಕೊಟ್ಟಿದ್ದೇವೆ. ಇನ್ನು ಉಳಿದುದನ್ನು ಸಾರ್ವಜನಿಕ ವಂತಿಕೆಯಿಂದ ಹಾಕಿಕೊಳ್ಳಬೇಕು. ಟಿ.ಎಂ.ಸಿ.ಯವರು ಹಾಕಿಕೊಳ್ಳಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸರ್ಕಾರದಿಂದ ಕೇವಲ 2 ಲಕ್ಷ ಮಾತ್ರ ಬಿಡುಗಡೆಯಾಗಿದೆ. ಉಳಿದ ಹಣವನ್ನು ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– ನಮ್ಮ ಹತ್ತಿರ ಇರತಕ್ಕ ಅಂಕಿಅಂಶಗಳ ಪ್ರಕಾರ, ಬಿಡುಗಡೆಯಾಗಿದೆ. ಬೇಕಾದರೆ ಇನ್ನೊಂದು ಸಾರಿ ನೋಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಇದರ ಬಗ್ಗೆ ತಾವು ನೋಡಬೇಕು. ಏಕೆಂದರೆ 2 ಲಕ್ಷ ಮಾತ್ರ ಬಿಡುಗಡೆಯಾಗಿದೆ. ಒಂದು ವೇಳೆ ಈ ಹಣ ಬಿಡುಗಡೆಯಾಗದಿದ್ದರೆ, ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– ಉಡುಪಿ ಮುನಿಸಿಪಾಲಿಟಿ ಬಹಳ ಉತ್ತಮವಾದ ಮುನಿಸಿಪಾಲಿಟಿ. ಇಡೀ ರಾಜ್ಯದಲ್ಲಿ ಉತ್ತಮವಾದ ಮುನಿಸಿಪಾಲಿಟಿ, ಶ್ರೀಮಂತ ಮುನಿಸಿಪಾಲಿಟಿ. ಮೊನ್ನೆ ಆ ಮುನಿಸಿಪಾಲಿಟಿ ಅಧ್ಯಕ್ಷರು ಬಂದಿದ್ದರು. ಸಾರ್ವಜನಿಕ ವಂತಿಕೆ 10 ಲಕ್ಷ ಹಾಕಬೇಕಾಗುತ್ತದೆ. ಸರ್ಕಾರದಿಂದ ಈಗಾಗಲೇ ಕೊಟ್ಟಿದ್ದೇವೆ. ಇನ್ನೇನಾದರೂ ಸಹಾಯ ಬೇಕಾದರೆ, ಮುಂದಿನ ವರ್ಷ ನೋಡೋಣ ಎಂದು ಹೇಳಿದ್ದೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– 2 ಲಕ್ಷ ಮಾತ್ರ ಬಿಡುಗಡೆಯಾಗಿದೆ, ಉಳಿದ 8 ಲಕ್ಷ ಬಿಡುಗಡೆ ಮಾಡುತ್ತೀರಾ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ತಮ್ಮ ಮಾಹಿತಿ ಪ್ರಕಾರ 10 ಲಕ್ಷ ಎಂದು ಹೇಳಿದ್ದೀರಿ, ದಯ ಮಾಡಿ ಇದು ಬಿಡುಗಡೆಯಾಗದಿದ್ದರೆ, ತಕ್ಷಣ ಬಿಡುಗಡೆ ಮಾಡಿಸುತ್ತೀರಾ ?

ಶ್ರೀ ಚೌಡರೆಡ್ಡಿ:– ಅದನ್ನು ನಾನು ನೋಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಗದೆ ಇದ್ದರೆ, ಬಿಡುಗಡೆ ಮಾಡಿಸುತ್ತೀರಾ ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ 1985ರಲ್ಲಿ 2 ಲಕ್ಷ ಕೊಟ್ಟಿದ್ದೇವೆ. 1989ರಲ್ಲಿ 2 ಲಕ್ಷ ಕೊಟ್ಟಿದ್ದೇವೆ. 1990ರಲ್ಲಿ 5 ಲಕ್ಷ ಕೊಟ್ಟಿದ್ದೇವೆ. ಒಟ್ಟು 9 ಲಕ್ಷ ಆಗಿದೆ. ಆದರೆ 1 ಲಕ್ಷಕ್ಕೆ ಮಾತ್ರ ಮಾಹಿತಿ ಸಿಗುತ್ತಿಲ್ಲ. 1 ಲಕ್ಷವನ್ನು ಮುಂದಿನ ವರ್ಷ ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ – ಬಿಡುಗಡೆ ಆಗದಿದ್ದರೆ 10 ಲಕ್ಷ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– 1 ಲಕ್ಷ ರೂಪಾಯಿಗಳಿಗೆ ಮಾತ್ರ ನನ್ನ ಹತ್ತಿರ ಫಿಗರ್ಸ್ ಇಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದು.

ಶ್ರೀ ಜಿ.ಎಸ್. ಯಡಿಯೂರಪ್ಪ:– ಬಿಡುಗಡೆ ಆಗದಿದ್ದರೆ ಉಳಿದ ಹಣದ ಜೊತೆಗೆ ಇದನ್ನು ಸೇರಿಸಿ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– 9 ಲಕ್ಷ ಆದ ಮೇಲೆ 1 ಲಕ್ಷ ರೂಪಾಯಿ ಬಿಡುಗಡೆ ಮಾತ್ರ ಮಾಡಬೇಕು ಅದನ್ನು ಮುಂದಿನ ವರ್ಷ ಬಿಡುಗಡೆ ಮಾಡುತ್ತೇನೆ.

ಶ್ರೀ ಜಿ.ಎಸ್. ಯಡಿಯೂರಪ್ಪ:– ಕೊಟ್ಟಿದ್ದರೆ ನಮ್ಮದೇನೂ ಆಭ್ಯಂತರ ಇಲ್ಲ. ಕೊಟ್ಟಿರದಿದ್ದರೆ ಬಿಡುಗಡೆ ಮಾಡುತ್ತೀರಾ ? ಈಗ 10 ಲಕ್ಷದಲ್ಲಿ 1 ಲಕ್ಷ ಮಾತ್ರ ಬಿಡುಗಡೆ ಆಗಿಲ್ಲ. ಅಂತ ತಾವು ಹೇಳುತ್ತಿದ್ದೀರಿ. ಬಿಡುಗಡೆ ಆಗದಿದ್ದರೆ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಈಗ ನಾವು ಇದನ್ನೆಲ್ಲಾ ಕೊಟ್ಟಿರತಕ್ಕಂಥಾದ್ದು ಡಿಸ್‌ಕ್ರಿಶನರಿ ಗ್ರಾಂಟ್. ಬೇರೆ ಇನ್ಯಾವುದರಲ್ಲೂ ನಮಗೆ ಹಣ ಇಲ್ಲ. ನಾವು ಒಂದು ಪ್ರೊಪೋಸಲ್ ಮುಖ್ಯಮಂತ್ರಿಗಳಿಗೆ ಕಳುಹಿಸಿ ಆಂದ್ರೆ ನಾವು ಕಳುಹಿಸುತ್ತೇವೆ. ಡಿಸ್‌ಕ್ರಿಶನರಿ ಗ್ರಾಂಟ್‌ನಲ್ಲಿ ನಾವು 9 ಲಕ್ಷ ರಿಲೀಸ್ ಮಾಡಿದ್ದೇವೆ. ಸೆಪರೇಟ್ ಆಗಿ ಬೇರೆ ಯಾವುದೂ ಇರುವುದಿಲ್ಲ.

ಬೆಂಗಳೂರಿನಲ್ಲಿ ವರ್ತುಲ ರೈಲ್ವೆ

360 (1834): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ನಿರ್ಧರಿಸಿರುವುದೆ;

ಆ) ಇದಕ್ಕೆ ಕೇಂದ್ರ ಸರ್ಕಾರದವರ ಸಮ್ಮತಿ ಸಿಕ್ಕಿದೆಯೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಬೆಂಗಳೂರು ನಗರದ ವರ್ತುಲ ರೈಲ್ವೆ ಕಾರ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಪರಿಶೀಲನೆ ಎಂದರೆ ಏನು ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ ಅವರು ಕೇಳಿರತಕ್ಕಂಥ ಪ್ರಶ್ನೆ, ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ ? ಅದಕ್ಕೆ ಉತ್ತರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ನಾವು ಉತ್ತರ ಕೊಟ್ಟಿದ್ದೇವೆ. ಮೊದಲೇ 1988ರಲ್ಲಿ ಒಂದು ಪ್ರಪೋಸಲ್ ಬಂದಿತ್ತು. ಬೆಂಗಳೂರು ಸಿಟಿ ಎಗ್ಜಿಸ್ಟಿಂಟ್ ರೈಲ್ವೆ ಕಾರಿಡಾರ್ಸ್ ಇಂಪ್ರೂವ್‌ಮೆಂಟ್ ಮಾಡತಕ್ಕಂಥಾದ್ದು ಇದೆ. ಸೆಂಟ್ರಲ್ ಗೌರ್ನಮೆಂಟ್‌ನವರು ರೈಲ್ವೆ ನಡೆಸುತ್ತಾರೆ ಅದನ್ನು ಇಂಪ್ರೂವ್‌ಮೆಂಟ್ ಮಾಡತಕ್ಕಂಥಾದ್ದು, ಅದರಲ್ಲಿ ಬೆಂಗಳೂರು ಸಿಟಿಯಿಂದ ವೈಟ್‌ಫೀಲ್ಡ್, ಬೆಂಗಳೂರು ಸಿಟಿಯಿಂದ ಕೆಂಗೇರಿನಗರ, ಬೆಂಗಳೂರು ಸಿಟಿಯಿಂದ ಹೆಚ್.ಎಂ.ಟಿ. ನಗರ. ಇದಕ್ಕೆ